ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆ.ಇ.ಬಿ. ಹುದ್ದೆಗಳ ಖಾಲಿ ಕುರಿತು

43 ಎ - ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬೇಕಾದ ಸಾಮಾಗ್ರಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಪೂರೈಸದಿರಲು ಕಾರಣವೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯಗಳಿಗಾಗಿ ಬೇಕಾಗುವ ಸಾಮಗ್ರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ಮಂಡಳಿಯ ಪೂರೈಕೆ ಮಾಡುತ್ತಿದೆ. ಈ ಜಿಲ್ಲೆಯಲ್ಲಿರುವ ಮಂಡಳಿಯ ಮಂಗಳೂರು ಪುತ್ತೂರ ಮತ್ತು ಉಡುಪಿ ವಿಭಾಗಗಳು ಸಾಮಗ್ರಿಗಳಿಗಾಗಿ ಸಲ್ಲಿಸುವ ಬೇಡಿಕೆಗಳನ್ನು ಗಮನಿಸಿ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಕಾವೇರಿ ಜಲಾನಯನ ಪ್ರದೇಶಗಳಲ್ಲಿನ ಖರ್ಚು ಮಾಡಿರುವ ಹಣ

153 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳಿನರಸೀಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳಿಗೆ ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ;

ಆ) 1993-94 ರಲ್ಲಿ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಇ) ಡಿಸೆಂಬರ್ 1993 ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1993-94 ಸಾಲಿನಲ್ಲಿ ನಿಗದಿಪಡಿಸಿರುವ ಹಣ 278.11 ಕೋಟಿ ರೂ.ಗಳು (ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ)

ಆ) 134.13 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ)

ಇ) 122.83 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ) ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರ)

ಸೇಡಂ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಏತ ನೀರಾವರಿ ಯೋಜನೆ

202 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರುಕುಂಟ ಐಹಾಳ ಹಾಗೂ ಯಡಗ ಗ್ರಾಮದ ಏತ ನೀರಾವರಿ ಯೋಜನೆಗಳು ಸರ್ವೆ ಮಾಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆ ಯೋಜನೆಗಳು ಕಾಗಿನ ಏತ ನೀರಾವರಿ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಸಾಧ್ಯವಾಗುವುದಿಲ್ಲವೆಂದು ಮುಖ್ಯ ಅಭಿಯಂತರರು, ಜಲ ಸಂಪನ್ಮೂಲ ಸಂಸ್ಥೆಯವರು ತಿಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಲ ಸಂಪನ್ಮೂಲ ಸಂಸ್ಥೆಯವರು ತಮ್ಮ ಪತ್ರ ಸಂಖ್ಯೆ. 292:1, ದಿನಾಂಕ: 30-10-92 ರ ಸಂಗಡ ಕಳುಹಿಸಿರುವ ನಕಾಶೆಯನ್ನು ವೀಕ್ಷಿಸಿದರೆ ಯಡಗ ಗ್ರಾಮ ಹಾಗೂ ಆ ಗ್ರಾಮದ ಭೂಮಿ ಕಾಗಿನ ನೀರಾವರಿ ಪ್ರದೇಶದಲ್ಲಿ ಬರುವುದಿಲ್ಲವೆಂದು ಕಂಡು ಬರುವುದಕ್ಕೆ ತಪ್ಪು ಉತ್ತರವನ್ನು ನೀಡಿ ಸ್ಥಗಿತಗೊಳಿಸಲು ಕಾರಣವೇನು?